ಸ್ವಲ್ಪಮಟ್ಟಿಗೆ ಸುಧಾರಿಸಿತು. ಬಡ ಕಾರ್ಮಿಕರು, ಕೂಲಿಗಳು ತೀವ್ರ ಹೃದ್ರೋಗದ ಸಮಸ್ಯೆಯಿಂದ ನಮ್ಮಲ್ಲಿಗೆ ಬಂದಾಗ, ಅವರಿಗೆ ಅಡ್ಮಿಟ್ ಆಗಲು ಹೇಳಿದರೆ, ತಕ್ಷಣ ಅವರು 'ಹಮ್ ಭರ್ತಿ ನಹೀ ಹೋಂಗೆ, ಇಲಾಜ್‌ಕೇ ಲಿಯೇ ಮುಲ್ಲೂಕ್ ಜಾಯೆಂಗೇ' ಎಂದು ಹೇಳುವುದು ಇಲ್ಲಿ ಸರ್ವೇ ಸಾಮಾನ್ಯ. ಬಹಳಷ್ಟು ಪಾಕಿಸ್ತಾನಿ, ಬಾಂಗ್ಲಾದೇಶದವರು ಹೆಚ್ಚಿನ ಚಿಕಿತ್ಸೆಗೆ ಮುಲ್ಲೂಕ್‌ಗೆ ಹೋಗುವುದಾಗಿ ಹೇಳುತ್ತಿದ್ದರು. ಹೊಸದಾಗಿ ಬಂದಾಗ ನನಗೆ ಈ ರೀತಿಯ ಉತ್ತರಗಳನ್ನು ಕೇಳಿ 'ಮುಲ್ಲೂಕ್' ಎಂಬುದು ನನಗೆ ಗೊತ್ತಿರದ, ಅವರ ದೇಶದ ಅತ್ಯುತ್ತಮ ಆಸ್ಪತ್ರೆಗಳನ್ನು ಹೊಂದಿರುವ ಯಾವುದೋ ಹೆಲ್ತ್ ಸಿಟಿ ಇರಬೇಕು ಎಂದುಕೊಂಡಿದ್ದೆ. ಒಮ್ಮೆ ಉತ್ತರ ಭಾರತದವನೊಬ್ಬ ಇದೇ ರೀತಿಯ ಉತ್ತರವನ್ನು ಕೊಟ್ಟಾಗ, "ಎಲ್ಲಾ ದೇಶದವರೂ ಈ 'ಮುಲ್ಲೂಕ್'ಗೆ ಹೋಗುತ್ತೇವೆಂದು ಹೇಳುತ್ತಿದ್ದಾರೆ, ನೀನೂ ಕೂಡ ಹಾಗೇ ಹೇಳುತ್ತಿದ್ದೀಯ. ಈ ಮುಲ್ಲೂಕ್ ಯಾವ ರಾಜ್ಯದಲ್ಲಿದೆ?" ಎಂದೆ. ಅವನು ನನ್ನ ಹಿಂದಿ ಅಜ್ಞಾನಕ್ಕೆ ಮರುಗಿ "ಮುಲ್ಲೂಕ್ ಎಂದರೆ ಅದು ಯಾವುದೋ ಊರಿನ ಹೆಸರಲ್ಲ. ಅದರ ಅರ್ಥ ನಮ್ಮ ದೇಶ, ಮಾತೃಭೂಮಿ'' ಎಂಬುದಾಗಿ ತಿಳಿಸಿದ. ಅದನ್ನು ಕೇಳಿ ನಾನು ಪೆಚ್ಚಾಗಬೇಕಾಯಿತು.

ಇನ್ನೊಮ್ಮೆ ಒಬ್ಬ ವ್ಯಕ್ತಿಗೆ ಹೃದಯಬಡಿತ ರೆಕಾರ್ಡ್ ಮಾಡುವಂತೆ ಪುಟ್ಟ ಬ್ಯಾಟರಿಯಂತ Holter ಎಂಬ ಉಪಕರಣವನ್ನು ಆತನ ಎದೆಯ ಭಾಗಕ್ಕೆ ಜೋಡಿಸಿ 24 ಗಂಟೆಯ ನಂತರ ಬಂದು ಹಿಂತಿರುಗಿಸಲು ಹೇಳಬೇಕಿತ್ತು. ಅದನ್ನು ಜೋಡಿಸಿದ ಆ 24 ಗಂಟೆಗಳು ಆತ ಉಪಕರಣವನ್ನು ನೆನೆಯದಂತೆ ನೋಡಿಕೊಳ್ಳಬೇಕು. ಹಾಗಾಗಿ ಸ್ನಾನ ಮಾಡಬೇಡ ಎಂದು ಹೇಳಬೇಕು. 'Do not take bath for 24 Hours' ಎಂದೆ. ಆತನಿಗೆ ಇಂಗ್ಲಿಷ್ ಬರುತ್ತಿರಲಿಲ್ಲ. ಆದ್ದರಿಂದ ಹಿಂದಿಯಲ್ಲಿ 'ಏಕ್ ದಿನ್ ಬಾತ್ ನಹೀ ಕರ್ನಾ ಹೈ' ಎಂದೆ. ಇಂಗ್ಲಿಷ್‌ನ Bath ಪದವನ್ನು ಯಾವುದೇ ಆಲೋಚನೆ ಮಾಡದೆ, ಕಡ ತೆಗೆದುಕೊಂಡು ಹಿಂದಿ ವಾಕ್ಯಕ್ಕೆ ಹಾಕಿದ್ದೆ. ಆತ ನನ್ನ ಮಾತನ್ನು ಶಿರಸಾವಹಿಸಿ ಪಾಲಿಸಿ ಒಂದು ಇಡೀ ದಿನ ಯಾರೊಂದಿಗೂ ಮಾತನಾಡಿರಲಿಲ್ಲವಂತೆ. ಮಾರನೆಯ ದಿನ ಬಂದಾಗ ಆತ 'ಒಂದು ಇಡೀ ದಿನ ಮಾತನಾಡದಂತಿರುವುದು ಕಷ್ಟ ಸರ್. ಇದನ್ನು ಹಾಕಿಕೊಂಡಾಗ ಯಾಕೆ ಮಾತನಾಡುವಂತಿಲ್ಲ?' ಎಂದು ಪ್ರಶ್ನಿಸಿದ. ಸ್ನಾನಕ್ಕೆ 'ನಹಾನ' ಎಂದು ಗೊತ್ತಿರದ ನಾನು ಆತನಿಗೆ 'ಒಂದು ದಿನ ಸ್ನಾನ ಮಾಡಬೇಡ' ಎಂಬುದನ್ನು ಹಿಂದಿಯಲ್ಲಿ 'ಏಕ್ ದಿನ್ ಬಾತ್ ನಹೀ ಕರ್ನಾ ಹೈ' ಎಂದು ಹೇಳಿದ ಪ್ರಮಾದದ ಅರಿವಾಯಿತು. ನನ್ನ ಭಾಷಾ ಪ್ರಯೋಗಕ್ಕೆ ಹಿಂದಿಯೇ ಒಂದು ಕ್ಷಣ ಹೌಹಾರಿತ್ತು.

ಇಲ್ಲಿಗೆ ಉದ್ಯೋಗಕ್ಕೆ ಒಂದೆರಡು ವರ್ಷಗಳಿಗೆಂದು ಬಂದವರು ರಿಟೈರ್ ಆಗುವವರೆಗೂ ಇಲ್ಲಿಯೇ ಕೆಲಸ ಮಾಡುತ್ತಾರೆ. ಏಕೆಂದರೆ ಮಸ್ಕತ್‌ನಲ್ಲಿ ನಾವು ಬೇರೆ ದೇಶದಲ್ಲಿದ್ದೇವೆಯೆಂದು ಅನ್ನಿಸುವುದಿಲ್ಲ. ಎಲ್ಲಿ ನೋಡಿದರೂ ನಮ್ಮ ದೇಶದವರೇ ಸಿಗುತ್ತಾರೆ. ಇಲ್ಲಿ ಎಲ್ಲಾ ರಾಜ್ಯಗಳ ಸಂಘ ಸಂಸ್ಥೆಗಳಿವೆ. ಹಾಗೆಯೇ ನಮ್ಮ ಕನ್ನಡ ಸಂಘವೂ ಬಹಳ ಬೆಳೆದಿದೆ. ನಮ್ಮ ನಾಡಿನ ಎಲ್ಲಾ ಹಬ್ಬಗಳನ್ನೂ ಒಂದು ಕಡೆ ಸೇರಿ ಆಚರಿಸುತ್ತೇವೆ. ಕನ್ನಡ ರಾಜ್ಯೋತ್ಸವವನ್ನು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತೇವೆ. ಹಾಗಾಗಿ ಯಾರಿಗೂ ಯಾವ ಹಬ್ಬ ಹರಿದಿನಗಳು ಮಿಸ್ ಆಗುವುದಿಲ್ಲ. ಇಲ್ಲಿ ಆಚರಿಸುವ ಕನ್ನಡ ರಾಜ್ಯೋತ್ಸವ ಹಾಗೂ ಇತರೆ ಉತ್ಸವಗಳಿಗೆ ಕಾಲಕಾಲಕ್ಕೆ ಕನ್ನಡದ ಸಾಂಸ್ಕೃತಿಕ ರಾಯಭಾರಿಗಳನ್ನೂ, ಉತ್ತಮ ವಾಗ್ಮಿಗಳನ್ನೂ, ಹಾಡುಗಾರರನ್ನು, ಸಿನಿಮಾ ತಾರೆಯರನ್ನು, ಧರ್ಮಗುರುಗಳನ್ನು ಇಲ್ಲಿಗೆ ಕರೆಸಲಾಗುತ್ತದೆ. ಇಲ್ಲಿ ಮುಸಲ್ಮಾನರಿಗೆ ಮಸೀದಿಗಳಿರುವಂತೆ, ಹಿಂದೂಗಳಿಗೆ ದೇವಸ್ಥಾನಗಳಿವೆ, ಕ್ರೈಸ್ತರಿಗೆ ಚರ್ಚುಗಳಿವೆ. ಎಲ್ಲರಿಗೂ ತಮ್ಮ ತಮ್ಮ ಧರ್ಮ ಪಾಲನೆಗೆ ಅವಕಾಶವಿದೆ, ಸ್ವಾತಂತ್ರ್ಯವಿದೆ. ಎಲ್ಲರೂ ಜೊತೆಯಲ್ಲಿ ಸೌಹಾರ್ದತೆಯಿಂದ ಬದುಕುತ್ತಿದ್ದಾರೆ.

ಇಲ್ಲಿ ಉಡುಪಿ ಹೋಟೆಲ್‌ಗಳಿಂದ ಹಿಡಿದು, ಶರವಣ ಭವನ, ಕಾಮತ್ ಹೋಟೆಲ್, ವಸಂತ ಭವನದಂತಹ ಹೋಟೆಲ್‌ಗಳು ಲಭ್ಯವಿದ್ದು, ಊರಿನಲ್ಲಿ ನಮಗೆ ಸಿಗುವ ದೋಸೆ, ಇಡ್ಲಿ, ಉಪ್ಪಿಟ್ಟು, ರೊಟ್ಟಿ, ಅನ್ನ-ಸಾಂಬಾರ್, ಮೊಸರನ್ನ ಇಲ್ಲಿಯೂ ಸಿಗುತ್ತವೆ. ಹಾಗಾಗಿ ಇಲ್ಲಿ ವಾಸಿಸುವ ನಮ್ಮ ನಾಡಿನ ಜನರಿಗೆ ದೇಶ ಬಿಟ್ಟು ಬಂದಿದ್ದರಿಂದ ನಮ್ಮ ಸಂಸ್ಕೃತಿ, ಭಾಷೆ ಅಥವಾ ಊಟ, ತಿಂಡಿಗಳಿಂದ ವಂಚಿತರಾಗಿದ್ದೇವೆಂದು ಅನಿಸುವುದಿಲ್ಲ. ಹಾಗಾದರೆ ನಾವು ಮಿಸ್ ಮಾಡಿಕೊಳ್ಳುವುದು